



ಜಾನಪದ ಕಲೆಗಳಿರಲಿ, ಸಾಂಪ್ರದಾಯಿಕ ಕಲೆಗಳಾಗಲಿ – ಅವು ಭಾರತೀಯ ಸಮಾಜ ಸಂಸ್ಕೃತಿಯ ಅನಾಪಹರಣ ಸಿರಿಖಜಾನೆ. ಅಲ್ಲಿ ವಾರಸುದಾರಿಕೆಯ ಹೊರತು ಮತಜಾತಿ, ಲಿಂಗಗಳ ತಾರತಮ್ಯವಿಲ್ಲ. ಇದ್ದರೆ ಅದು ಸಾಮುದಾಯಿಕ ಕಲಾ ಸಂಸ್ಕೃತಿಯಾಗಿ ಉಳಿದಿರುವುದಿಲ್ಲ. ಅದು ಸಿರಿಯಲ್ಲ, ದಾರಿದ್ರ್ಯ. ಬರೀ ದಾರಿದ್ರ್ಯವಲ್ಲ ಕಡುದಾರಿದ್ರ್ಯ. ತಮ್ಮ ಅಸ್ತಿತ್ವವೂ ಸೇರಿ, ಈ ಶ್ರೀಮಂತಿಕೆಯ ಉಳಿವಿನ ಅಂಶವು ಒಂದಾಗಿ ಮಹಿಳಾ ನಾಟಕ ಮಂಡಲಿಗಳು, ಮಹಿಳಾ ಡೊಳ್ಳು ಕುಣಿತ ಸಂಘ/ ತಂಡಗಳು, ಸ್ತ್ರೀ ಕಲಾ ಸಮಾಜಗಳು ಬೆಳೆದು ಬಂದವು. ಇಂಥ ಸಂಘ ಸಂಸ್ಥೆಗಳಲ್ಲೊಂದು ಮುಳಬಾಗಿಲಿನ 'ಶ್ರೀ ಪಾಂಡುರಂಗ ಗೊಂಬೆಯಾಟದ ತಂಡ'. ಎಪ್ಪತ್ತೆರಡು ವರ್ಷದ, ಹುರುಪಿನ, ಮೊನಚು ಬಾಗದ, ನಿವೃತ್ತ ಶಿಕ್ಷಕಿ ಮುಳಬಾಗಿಲು ಕೆ. ಪದ್ಮಾವತಮ್ಮ ಇದರ ಚಾಲಕ ಶಕ್ತಿ.

ಮಕ್ಕಳಿಗೆ ಕಪ್ಪು ಹಲಗೆಯ ಮೇಲೆ ಅಕ್ಷರ ಬರೆದ ಕೈ ಮುಂದೊಂದು ದಿನ ಗೊಂಬೆ ಆಡಿಸುವುದೆಂಬ ಕಲ್ಪನೆಯೇ ಇರದಿದ್ದ ಮುಳಬಾಗಿಲಿನ ಪದ್ಮಾವತಮ್ಮ ಮೇಡಂ ತಮ್ಮ ಅರವತ್ತೆಂಟನೆಯ ವಯಸ್ಸಿನಲ್ಲಿ ಗೊಂಬೆ ಆಡಿಸಿದ್ದಂತೂ ಸತ್ಯ. ಖ್ಯಾತ ಗೊಂಬೆಯಾಟದ ಕಲಾವಿದ ಮಾಗಡಿಯ ಎಂ.ಆರ್. ರಂಗರಾವ್ ಮುಳಬಾಗಿಲಿಗೆ ಬಾರದೆ ಹೋಗಿದ್ದರೆ ಪದ್ಮಾವತಮ್ಮ ನಿವೃತ್ತ ಶಿಕ್ಷಕಿಯಾಗಿ ಮನೆಯಲ್ಲಿಯೇ ಇದ್ದು ಬಿಡುತ್ತಿದ್ದರು. ಗುರುವಿನ ಮರು ದರ್ಶನ ಇವರ ಕೈಲಿ ಗೊಂಬೆ ಹಿಡಿಸಿತು. ಶಿಕ್ಷಕಿ ಕಲಾವಿದೆಯಾದರು. ಇದು ಅನೂಹ್ಯ ಘಟನೆ ಹೇಗೋ ಹಾಗೆ ಬಯಸದೆ ದೊರೆತ ಅವಕಾಶ. ಅತಿ ಸಂಪ್ರದಾಯನಿಷ್ಠ ಕುಟುಂಬದ ಹೆಣ್ಣಿನಿಂದ ಇಂತಹುದೊಂದು ಪ್ರಯತ್ನ ಬಹುದೂರದ್ದು; ಆದರಿಂದು ಆ ದೂರ ಉಳಿದಿಲ್ಲ.

ತಮ್ಮ ತವರು ಕಪ್ಪಲಮಡುಗುನಲ್ಲಿ ಹೈಸ್ಕೂಲು ಮುಗಿಸಿದ ಅವರು ಶಿಕ್ಷಕ ತರಬೇತಿಗಾಗಿ ಬೆಂಗಳೂರಿಗೆ ಹೋದಾಗ, ತಮ್ಮ ಪಠ್ಯ ಚಟುವಟಿಕೆಗಳ ಮೂಲಕ ಅಲ್ಲಿ ಬೋಧಕರಾಗಿದ್ದ ರಂಗನಾಥರಾವ್ ಅವರ ಗಮನ ಸೆಳೆದಿದ್ದರು. ತರಬೇತಿ ಮುಗಿಸಿದ ನಂತರ ಸಂಪರ್ಕವಿರಲಿಲ್ಲ. ಆದರೆ ಮುಂದೊಂದು ದಿನ ಹರಿದ ಸಂಪರ್ಕದ ಕೊಂಡಿ ಕೂಡಿಕೊಂಡು, ಅವರು ತಮಗೆ ಗೊಂಬೆಯಾಟದ ಗುರು ಆಗುವರೆಂಬ ಕಾಲಗರ್ಭದಲ್ಲಿದ್ದ ಸತ್ಯ ಇಬ್ಬರಿಗೂ ತಿಳಿದಿರಲಿಲ್ಲ.

ಪದ್ಮಾವತಮ್ಮ ವೃತ್ತಿಯಿಂದ ನಿವೃತ್ತರಾದ ಐದು ವರ್ಷಕ್ಕೆ ಗುರು–ಶಿಷ್ಯೆಯ ಭೇಟಿ ನಡೆಯಿತು, ಮುಳಬಾಗಿಲಿನ ಪುರಂದರ ಭವನದಲ್ಲಿ. ರಂಗನಾಥರಾಯರು 'ಪುರಂದರ ಆರಾಧನೆ'ಗೆ ಆಹ್ವಾನಿತರಾಗಿ ಗೊಂಬೆಯಾಡಿಸಲು ಬಂದಿದ್ದರು. ಗುರು ಪ್ರದರ್ಶಿಸಿದ ಗೊಂಬೆಯಾಟದಿಂದ ಪ್ರೇರಿತರಾದ ಪದ್ಮಾವತಮ್ಮ ಕಲಿವ ಬಯಕೆ ಹೇಳಿಕೊಂಡರು. ಒಂದುಕಾಲದ ಯುವಶಿಷ್ಯೆ ವಯೋಹಿರಿಯ ಶಿಷ್ಯೆಯಾಗಿ ಗುರುವಿನ ಮುಂದೆ ನಿಂತಳು.

ಪ್ರಸನ್ನರಾದ ಗುರು ಮುಳಬಾಗಿಲಿಗೆ ಬಂದು, ಪುರಂದರ ಭವನದಲ್ಲಿ ವಸತಿ ಹೂಡಿ, ಎರಡೂವರೆ ವರ್ಷಕಾಲ ಶಿಷ್ಯೆಗೆ ಗೊಂಬೆಯಾಟದ ತರಬೇತಿ ನೀಡಿ ತಮ್ಮ ಶಿಷ್ಯ ಪರಂಪರೆಗೆ ಸೇರಿಸಿಕೊಂಡರು. ಅಷ್ಟೇ ಅಲ್ಲದೆ ತಾವು ಆಡಿಸುತ್ತಿದ್ದ ಗೊಂಬೆಗಳನ್ನೇ ಕೊಟ್ಟು ಹರಸಿದರು. ಆ ಹಾರೈಕೆ ಏಳುಮಂದಿ ಮಹಿಳಾ ಕಲಾವಿದರ ತಂಡ ಕಟ್ಟಿ, 'ಶ್ರೀ ಪಾಂಡುರಂಗ ಗೊಂಬೆಯಾಟದ ತಂಡ'ದ ಸ್ಥಾಪನೆಗೆ ಕಾರಣವಾಯಿತು. ಅದರ ಮೂಲಕ 'ಶ್ರೀಕೃಷ್ಣ ಪಾರಿಜಾತ', 'ಶ್ರೀಕೃಷ್ಣ ತುಲಾಭಾರ', 'ನರಕಾಸುರ ವಧೆ' ಎಂಬ ಭಾಗವತದ ಮೂರು ಪ್ರಸಂಗಗಳನ್ನು ಗೊಂಬೆಯಾಟಕ್ಕೆ ಆಯ್ದುಕೊಂಡರು.

ತಮ್ಮ ಎಪ್ಪತ್ತೆರಡನೆಯ ವಯಸ್ಸಿನಲ್ಲಿಯೂ ಪದ್ಮಾವತಮ್ಮ ದಣಿಯದೆ ತಂಡವನ್ನು ಮುನ್ನಡೆಸುತ್ತಿದ್ದಾರೆ. ನಾಲ್ಕು ವರ್ಷಗಳಿಂದ ಕರ್ನಾಟಕವೂ ಸೇರಿದಂತೆ ನಾಲ್ಕಾರು ರಾಜ್ಯಗಳಲ್ಲಿ ಅವರ ತಂಡ ನೀಡಿದ ಪ್ರದರ್ಶನಗಳ ಸಂಖ್ಯೆ ಅರ್ಧ ಶತಕ ದಾಟಿದೆ. ಅವರ ಗೊಂಬೆಯಾಟದ ತಂಡದಲ್ಲಿ ಇರುವ ಎಲ್ಲ ಕಲಾವಿದರು ಮಹಿಳೆಯರೇ ಎಂಬುದು ವಿಶೇಷ. ಈ ಪ್ರಕಾರದಲ್ಲಿ ಪ್ರಥಮ ಮಹಿಳಾ ಕಲಾ ತಂಡವೆಂಬ ಖ್ಯಾತಿ ಇದೆ. ಮಾಧವಿ ಶೇಷಗಿರಿ, ಸಾನ್ವಿ, ಶೈಲಾ ವೆಂಕಟೇಶ್, ವೀಣಾ ಮಧುಸೂದನ್, ಶ್ರೀಪರ್ಣ ಕಲಾವಿದರು. ಶ್ರೀಪರ್ಣಳದು ಬಾಲ ಪ್ರತಿಭೆ. ಪ್ರೇಮಸಾಗರ್ ರಂಗಸಜ್ಜಿಕೆಯಿಂದ ಹಿಡಿದು ಇವರ ಬೆಂಗಾವಲಿಗಿದ್ದಾರೆ.

ಹೊಸ ಆಟಗಳನ್ನು ಕಟ್ಟುವ ಯೋಜನೆಗಳನ್ನು ರೂಪಿಸಿಕೊಳ್ಳುತ್ತಿರುವ ಪದ್ಮಾವತಮ್ಮ ಮತ್ತವರ ಸಹಕಲಾವಿದರು, ಕೋಲಾರ ಜಿಲ್ಲೆಯ ಪ್ರಸಿದ್ಧ 'ಕುರುಡುಮಲೆ ಗಣೇಶ ಚರಿತ್ರೆ'ಯನ್ನು ಗೊಂಬೆಯಾಟಕ್ಕೆ ಅಳವಡಿಸುವ ಹವಣಿಕೆಯಲ್ಲಿದ್ದಾರೆ. ಅದಕ್ಕೆ ಅಗತ್ಯವಾದ ಗೊಂಬೆಗಳನ್ನು ರಂಗನಾಥರಾಯರ ಮೂಲಕ ಮಾಡಿಸುವ ಪ್ರಯತ್ನ ನಡೆಸಿದ್ದಾರೆ.

'ಮಡಿ ಆಚಾರವೆಂಬುದು ವೈಯಕ್ತಿಕ ಮತ್ತು ಮನೆಗೆ ಸೀಮಿತವಾದುದು. ಇದು ಸಾಮಾಜಿಕವಲ್ಲ. ಹಾಗಾಗಿ ಕಲೆಗೆ ಇದು ಅಂಟುವುದಿಲ್ಲ. ಕಲಿಕೆಯಲ್ಲಿ ಶ್ರದ್ಧೆ–ಆಸಕ್ತಿ ಇರುವ ಯಾವ ಜಾತಿಯವರಿಗಾದರೂ ಮುಕ್ತವಾಗಿ ಗೊಂಬೆ ಆಟ ಕಲಿಸುವುದಕ್ಕೆ ತಾವು ಸಿದ್ಧ' ಎಂದು ತಮ್ಮಲ್ಲಿನ ಜಾತ್ಯತೀತ ಭಾವನೆಯೊಂದಿಗೆ ಪದ್ಮಾವತಮ್ಮ ಹೇಳುತ್ತಾರೆ. ಆದರೆ, ಮಹಿಳೆಯರು ಆಡಿಸುವ ಬೊಂಬೆಯಾಟಕ್ಕೆ ಸಮಾನ ಅವಕಾಶ ಇಲ್ಲವೆಂಬ ಮನದಾಳದ ಕೊರಗು ಅವರ ಮಾತಿನಲ್ಲಿ ಎದ್ದು ಕಾಣುತ್ತದೆ. ■